**<u>ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ</u>**

**<u>ಸಿ.ಸಿ. ನಂ. 75/2025</u>**

ಫಿರ್ಯಾದಿಃ ಸರಕಾರದ ಪರವಾಗಿ
ಅಬಕಾರಿ ಉಪ ನಿರೀಕ್ಷಕರು-I,
ಹೊನ್ನಾವರ ವಲಯ,
ಹೊನ್ನಾವರ (ಉ.ಕ.)

**-ವಿರುದ್ಧ-**

ಆರೋಪಿಃ ವಾಣಿ ಗೋಪಾಲ ಗೌಡ,
ವರ್ಷಃ
ಸಾಕೀನಃ ಪಡುಕುಳಿ, ಜಲವಳ್ಳಿ,
ತಾಲೂಕುಃ ಹೊನ್ನಾವರ.

**ದೋಷಾರೋಪಣೆ**

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತಳ ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನು ಹೊರಿಸುತ್ತಿದ್ದೇನೆ.

ದಿನಾಂಕಃ 08-04-2025 ರಂದು ಸಾಯಂಕಾಲ 6.30 ಗಂಟೆ ಸುಮಾರಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ, ಕಾರವಾರ ರವರು ಪಡುಕುಳಿ ಗ್ರಾಮದ ಮಹಿಳೆಯರು ಅಕ್ರಮ ಮಧ್ಯ ಮಾರಾಟವನ್ನು ತಡೆಯುವಂತೆ ದೂರು ನೀಡಿದ್ದು, ಅದರಂತೆ ಅಬಕಾರಿ ಅಧಿಕಾರಿಗಳು ಹಾಗೂ ಕಂದಾಯ ಇಲಾಖೆಯ ಸಿಬ್ಬಂದಿಗಳು ಜಂಟಿಯಾಗಿ ಸದರಿ ದೂರಿನ ಕುರಿತು ಹೊನ್ನಾವರ ತಾಲೂಕಿನ ಜಲವಳ್ಳಿ ಗ್ರಾಮದ ಪಡುಕುಳಿಯ ನಿವಾಸಿಯಾದ ಆರೋಪಿತಳ ಮನೆಯನ್ನು ಶೋಧಿಸಲಾಗಿ ಮನೆಗೆ ಹೊಂದಿಕೊಂಡಿರುವ ಅಂಗಡಿಯ ಕೌಂಟರ್ ಕೆಳಗಡೆ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 90 ಮಿ.ಲೀ. ಅಳತೆಯ ಒರಿಜಿನಲ್ ಚಾಯ್ಸ್ ವಿಸ್ಕಿಯ 39 ಟೆಟ್ರಾ ಪ್ಯಾಕೇಟ್ ಗಳು, ಒಂದು ನೀಲಿ ಬಣ್ಣದ ಕೈಚೀಲದಲ್ಲಿ 90 ಮಿ.ಲೀ. ಅಳತೆಯ ಹೈವರ್ಡ್ಸ್ ವಿಸ್ಕಿಯ 5 ಟೆಟ್ರಾ ಪ್ಯಾಕೇಟ್ ಗಳು, ಒಂದು ಕೆಂಪು ಬಣ್ಣದ ಕೈಚೀಲದಲ್ಲಿ 500 ಮಿ.ಲೀ. ಅಳತೆಯ ಬುಲೇಟ್ ಸ್ಟ್ರಾಂಗ್ ಬಿಯರ್ ಎಂದು ನಮೂದಿರುವ 4 ಟಿನ್ ಗಳು, ಒಂದು ಕೆಂಪು ಬಣ್ಣದ ಕೈಚೀಲದಲ್ಲಿ 650 ಮಿ.ಲೀ. ಅಳತೆಯ ಬುಲೇಟ್ ಸ್ಟ್ರಾಂಗ್ ಬಿಯರ್ ಎಂದು ನಮೂದಿರುವ 2 ಬಾಟಲಿಗಳನ್ನು ಆರೋಪಿತಳು ಸ್ವಾಧೀನದಲ್ಲಿಟ್ಟುಕೊಂಡಿದ್ದು ಚಾ.ಸಾ. 1 ರವರು ಅವನ್ನು ಪಂಚನಾಮೆಯಡಿ ಜಪ್ತುಪಡಿಸಿಕೊಂಡಿದ್ದು, ಈ ಮೂಲಕ ಆರೋಪಿತಳು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 14, 15, 32(1), 38(ಎ) ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಗಳನ್ನ ಹೊರಿಸುತ್ತಿದ್ದೇನೆ.

ಮೇಲಿನ ಆಪಾದನೆಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತಿದ್ದೇನೆ.

Sd/-

ದಿನಾಂಕಃ 08-01-2026. **(ಶ್ರೀ ಬಿ.ಸಿ. ಚಂದ್ರಶೇಖರ್)**
ಸ್ಥಳಃಹೊನ್ನಾವರ. **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**

ಪ್ರ.ದ.ನ್ಯಾಯದಂಡಾಧಿಕಾರಿಗಳು, ಹೊನ್ನಾವರ.

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಂ. 75/2025**

ಫಿರ್ಯಾದಿಃ ಸರಕಾರದ ಪರವಾಗಿ
ಅಬಕಾರಿ ಉಪ ನಿರೀಕ್ಷಕರು–I,
ಹೊನ್ನಾವರ ವಲಯ,
ಹೊನ್ನಾವರ (ಉ.ಕ.)

**–ವಿರುದ್ಧ–**

ಆರೋಪಿಃ ವಾಣಿ ಗೋಪಾಲ ಗೌಡ,
ಸಾಕೀನಃ ಪಡುಕುಳಿ, ಜಲವಳ್ಳಿ,
ತಾಲೂಕುಃ ಹೊನ್ನಾವರ.

**ಆಪಾದನೆ**

ಪ್ರಶ್ನೆಃ ಈಗ ಓದಿ ಹೇಳಿದ ದೋಷರೋಪಣೆಗಳನ್ನು ನಿಮಗೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ ಸದರಿ ದೋಷರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೊ?

ಉತ್ತರಃ

(ಸದರಿ ದೋಷಾರೋಪಣೆಗಳನ್ನು ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

Sd/-

ದಿನಾಂಕಃ 08–01–2026. **(ಶ್ರೀ ಬಿ.ಸಿ. ಚಂದ್ರಶೇಖರ್)**

ಸ್ಥಳಃಹೊನ್ನಾವರ. **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**